# ಸಿನಿಕರ್ಮಿ ನಿರ್ದೇಶಕಿ ಆದ ಪ್ರಕ್ರಿಯೆಯು

ಅವರ ಬೈತಲೆ ಶುರುವಾಗುವುದೇ ಗಮನ ಸೆಳೆಯುವ ಕುಂಕುಮದಿಂದ. ಆಕೆ ಆತ್ಮವಿಮರ್ಶೆ ಮಾಡಿಕೊಳ್ಳುವಷ್ಟು ಪ್ರಬುದ್ಧತೆ ಇರುವ ಮಹಿಳೆ. ಮೈಸೂರಿನಲ್ಲಿ ಸಿನಿಮಾ ಅರಳುತ್ತಿದ್ದ ಕಾಲದಲ್ಲಿ ತನ್ನನ್ನು ತಾನೇ ಸಿನಿ 'ಮಹಾತ್ಮ' ಎಂದು ಭಾವಿಸಿದಂತಿದ್ದ ಚಿತ್ರ ನಿರ್ಮಾಣ ಸಂಸ್ಥೆ ಇತ್ತಲ್ಲ; ಅದನ್ನು ಹುಟ್ಟುಹಾಕಿದವರ ಮಗಳು. ಸ್ಫುರದ್ರೂಪ ಅಮ್ಮನಿಂದ ಬಂದದ್ದು. ಅಣ್ಣ ನಿರ್ದೇಶಕನಾಗಿ ಹೆಸರು ಮಾಡಿದ ಮೇಲೆ ಸಿನಿಮಾ ನಂಟಿಗೆ ಇನ್ನೊಂದು ಅರ್ಥ ಸಿಕ್ಕಿತು. ವಸ್ತ್ರವಿನ್ಯಾಸ, ಪಾತ್ರಗಳ ಆಯ್ಕೆಯ ಸಲಹೆ, ನಟನೂ ಆಗಿದ್ದ ಗಂಡನ ಆದ್ಯತೆಗಳನ್ನು ಪೂರೈಸುವುದು ಎಲ್ಲವನ್ನೂ ತೂಗಿಸಿಕೊಂಡು ಬಂದ ಅವರು ನಟಿಯೂ ಹೌದು. ಆದರೆ, ಅದರಲ್ಲೇ ಕಳೆದುಹೋಗಲಿಲ್ಲ. ಮೂರು ಹೆಣ್ಣುಮಕ್ಕಳನ್ನು ಬೆಳೆಸುವ ಜವಾಬ್ದಾರಿ ಹೆಗಲಿಗೆ ಬಿದ್ದಮೇಲಂತೂ ಬದುಕಿನ ಬಹು ಟಾಸ್ಕುಗಳು ಹೆಚ್ಚಾದವು.

ಗೃಹಿಣಿಯಾಗಿಯಷ್ಟೇ ಅವರು ಉಳಿಯಲಿಲ್ಲ. ಅಣ್ಣನ ಜೊತೆ ಆಗೀಗ ಸಿನಿಮಾ ಸಂವಾದ ನಡೆಯುತ್ತಲೇ ಇತ್ತು. ಸಿನಿಜ್ಞಾನ ವಿಸ್ತಾರಕ್ಕೆ ಇದಕ್ಕಿಂತ ಬೇರೆ ಕಾರಣ ಬೇಕಿಲ್ಲವಲ್ಲ. ಚಿತ್ರೀಕರಣ, ಅದರ ಸೂಕ್ಷ್ಮಗಳು, ಯೋಜನೆ, ಬಜೆಟ್ ಸರಿದೂಗಿಸಿಕೊಂಡು ಹೋಗುವ ಪ್ರಕ್ರಿಯೆ ಎಲ್ಲದರ ಪರಿಚಯ ಇದ್ದರೂ ಎಂದೂ ಆಕ್ಷನ್ ಕಟ್ ಹೇಳುವ ಯೋಚನೆ ಮನಸ್ಸಿಗೆ ಬಂದಿರಲಿಲ್ಲ.

ಪಂತುಲು ಕೊಟ್ಟ 'ಸ್ಕೂಲ್ ಮಾಸ್ಟರ್' ಸಿನಿಮಾ ಮುತ್ತು ಗೊತ್ತಲ್ಲ; ಅದು ಹೇಗೋ ಬಾಲಿವುಡ್‌ನವರ ಅರಿವಿಗೆ ಬಂದು, ಹೊಸ ರೂಪದಲ್ಲಿ 'ಬಾಗ್‌ಬನ್' ಆಯಿತು. ಸಿನಿಜ್ಞಾನ ಇರುವ ಮಹಿಳೆಗೆ, ಹಿಂದಿಯ ಅಮಿತಾಭ್ ಬಚ್ಚನ್ ಅವರನ್ನು ಆ ಪಾತ್ರದಲ್ಲಿ ನೋಡಿದಾಕ್ಷಣ ಕನ್ನಡದ ವಿಷ್ಣುವರ್ಧನ್ ಆ ಪಾತ್ರದಲ್ಲಿ ಅಭಿಯಿಸಿದರೆ ಎಷ್ಟು ಚೆನ್ನಾಗಿರುತ್ತದೆ ಎನಿಸಿತು. ನಟ ಸಿಕ್ಕಾಗ ಅದನ್ನು ಹೇಳಿಬಿಟ್ಟರು. ಫ್ರೆಂಚ್ ಗಡ್ಡ ಬಿಟ್ಟು ತಯಾರಾದ ವಿಷ್ಣು, ಚಿತ್ರಕಥೆ ನೋಡಿ ಕಣ್ಣಲ್ಲಿ ಎರಡು ಹನಿ ನೀರು ತುಂಬಿಕೊಂಡರು. ಮಹಿಳೆಯ ಕಣ್ಣಲ್ಲೂ ಆನಂದಬಾಷ್ಪ. 'ನೀನೇ ನಿರ್ದೇಶನ ಮಾಡು' ಎಂದು ಹಿರಿಯ ನಟ ಅಪ್ಪಣೆ ಕೊಟ್ಟಾಗ ಮಹಿಳೆ ಹಣೆ ಮೇಲೆ ಸಣ್ಣ ಬೆವರು. ಅದನ್ನು ಒರೆಸಿಕೊಂಡು ಅವರು ನಿರ್ದೇಶನಕ್ಕೆ ತಯಾರಾಗಿಯೇ ಬಿಟ್ಟರು. ಕನ್ನಡದಲ್ಲಿ 'ಬಾಗಿದ ಬೆನ್ನಿನ ಕತೆ' ಸಿದ್ಧವಾಯಿತು. ಒಂದೆರಡು ಹಾಡುಗಳನ್ನು ಜನ ಗುನುಗಿದರು. ಅಮಿತಾಭ್‌ಗೆ ಸಿಕ್ಕ ಯಶಸ್ಸು ಈ ಸಿನಿಮಾದಲ್ಲಿ ವಿಷ್ಣುವಿಗೆ ಸಿಗಲಿಲ್ಲ ಎನ್ನುವುದು ಬೇರೆ ಮಾತು. ಹಿಂದೆ ನೋಡಿದ್ದ ಕನ್ನಡದ ಹಳೆಯ ಸಿನಿಮಾ ಕತೆಯನ್ನು ಹೊಸ ಅವತರಣಿಕೆಯಲ್ಲಿ ಹೆಚ್ಚು ಜನ ನೋಡಲು ಇಷ್ಟಪಡಲಿಲ್ಲ. ಆದರೆ, ಸಿನಿಮಾ ವರಸೆಗಳನ್ನು ಬಲ್ಲ ಮಹಿಳೆ ನಿರ್ದೇಶನದ ಜವಾಬ್ದಾರಿ ನಿಭಾಯಿಸಿ ಗೆದ್ದುದು ಗಮನ ಸೆಳೆಯಿತು.

ಮುಂದೆ ಇನ್ನೂ ಎರಡು ಸಿನಿಮಾಗಳನ್ನು ನಿರ್ದೇಶಿಸಿದರು. ಹಲವು ವರ್ಷಗಳ ನಂತರ ಅಭಿನಯದ ಅವಕಾಶವೂ ಅವರಿಗೆ ಸಿಕ್ಕಿತು. ಅಂಬರೀಷ್ ಪತ್ನಿಯಾಗಿ ಮುದುಕಿಯ ಪಾತ್ರದ ನಿಕಷಕ್ಕೆ ಒಡ್ಡಿಕೊಂಡರು. ಬಹುಮುಖ ಪ್ರತಿಭೆ ಎಂದು ನಿಸ್ಸಂಶಯವಾಗಿ ಹೇಳಬಹುದಾದ ಈ ನಟಿಯನ್ನು ರೀಮೇಕ್, ರೀಮಿಕ್ಸ್ ನಿರ್ದೇಶಕಿ ಎಂದು ಕೆಲವರು ಕಾಲೆಳೆಯುವುದೂ ಉಂಟು.

**● ವಿಶಾಖ ಎನ್.**

Printed and Published by B.A. Ravi on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: **K.N. SHANTH KUMAR.**

Editorial Office: 75, M.G Road, Bengaluru-560 001 E-mail:editormy@mayura.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68